Reg. No. |  |  |  |  |  |  |  |  |

# BCAKAL 153/BSAKAL 153/BFDKAL 155/BGDKAL 155/BIDKAL 155

ಗುಣಾಂಕ ಆಧಾರಿತ ಎರಡನೆಯ ಸೆಮಿಸ್ಟರ್ ಬಿ.ಸಿ.ಎ./ಬಿ.ಎಸ್ಸಿ (ಎನಿಮೇಶನ್ ಮತ್ತು ವಿಶುವಲ್ ಇಫೆಕ್ಟ್)/ ಬಿ.ಎಸ್ಸಿ (ಫ್ಯಾಷನ್ ಡಿಸೈನ್)/ಬಿ.ಎಸ್ಸಿ (ಗಾರ್ಮೆಂಟ್ ಡಿಸೈನ್)/(ಬಿ.ಎಸ್ಸಿ (ಇಂಟೀರಿಯರ್ ಡಿಸೈನ್ ಮತ್ತು ಡೆಕೋರೇಶನ್) ಪದವಿ ಪರೀಕ್ಷೆ, ಏಪ್ರಿಲ್/ಮೇ 2014

**(2013-2014 Batch and Onwards)**

**KANNADA/ADVANCED KANNADA – II**

ಸಮಯ : 3 ಗಂಟೆಗಳು

ಗರಿಷ್ಠ ಅಂಕಗಳು : 80

## ಭಾಗ – 1 (ಕಾವ್ಯ)

I. ಅ) ಕೆಳಗಿನವುಗಳಲ್ಲಿ ಒಂದು ಪ್ರಶ್ನೆಗೆ ಉತ್ತರಿಸಿರಿ : **(1×8=8)**

1) ಕೈಕೆಯ ಪಾತ್ರದಲ್ಲಿ ವ್ಯಕ್ತವಾಗುವ ಮಾನವ ಸಹಜ ಗುಣಗಳನ್ನು ಗುರುತಿಸಿ.

2) ಕನ್ನಡತನವನ್ನು ಮೈಗೂಡಿಸಿಕೊಂಡು ಮಕ್ಕಳು ಬೆಳೆಯ ಬೇಕೆಂಬ ಆಶಯವು ಕನ್ನಡದ ಮಾತು ಕವಿತೆಯಲ್ಲಿ ಹೇಗೆ ಬಂದಿದೆ ? ವಿವರಿಸಿ.

ಆ) ಕೆಳಗಿನವುಗಳಲ್ಲಿ ಒಂದು ಪ್ರಶ್ನೆಗೆ ಸಂಕ್ಷಿಪ್ತವಾಗಿ ಉತ್ತರಿಸಿರಿ : **(1×5=5)**

1) ಡಾಂಭಿಕ ಬದುಕಿನ ಬಗೆಗೆ ದಾಸಿಮಯ್ಯನ ನಿಲುವು ಯಾವುದು ? ಗುರುತಿಸಿ.

2) ದ್ರೌಪದಿಯ ಪಾತ್ರದ ವೈಶಿಷ್ಟ್ಯವನ್ನು ಗುರುತಿಸಿ.

ಇ) ಎರಡಕ್ಕೆ ಟಿಪ್ಪಣಿ ಬರೆಯಿರಿ : **(2×3=6)**

1) ಡಿ.ವಿ.ಜಿ.

2) ಸ್ತ್ರೀಯ ಮನಸ್ಸಿನಲ್ಲಿ ತವರಿನ ಕಲ್ಪನೆ

3) ಮಾನವನ ಆಸೆಗೆ ಮಿತಿಯಿಲ್ಲ.

P.T.O.

II. ಅ) ಒಂದು ಪದ್ಯ ಭಾಗದ ಸಂದರ್ಭ ಸೂಚಿಸಿ ಮಹತ್ವವನ್ನು ವಿವೇಚಿಸಿರಿ : (1×5=5)

1) ಪತಿದೀಕ್ಷೆಗೊಂಡನಪರಾ
ಜಿತೆಗಿನಿವಿರಿದಾಯ್ತು ದುಃಖಭಾರಂ ಧರೆಯಂ
ಸುತನುಮಿಱಿಕೆಯ್ದನೀ ದು
ಷ್ಕೃತಮಂ ಸ್ತ್ರೀತ್ವದ ಜಡತ್ವದಿಂದೊಡರಿಸಿದಂ

2) ಶಿವನೆ ಕೈಮುಗಿದು ಬೇಡುವೆನು ನಿನಗೆ
ತವರ ಸಿರಿ ಬೆಳೆಯ ಬರಲಿ ನಮ್ಮಣ್ಣಗೆ
ತಾಯಿ ನೆನಪಿರಲಿ ಮುಂದೆ ಎಂದೆಂದಿಗೂ
ಕಾಯಿ ಕರ್ಪೂರ ತರುವೆ ನಿನ್ನ ಗುಡಿಗೆ

ಆ) ಎರಡು ಸಾಲುಗಳಿಗೆ ಸಂದರ್ಭ ಸೂಚಿಸಿ ಸ್ವಾರಸ್ಯವನ್ನು ವಿಶದಪಡಿಸಿರಿ : (2×3=6)

1) ಕತ್ತೆ ಬಲ್ಲುದೆ ಕತ್ತುರಿಯ ವಾಸನೆಯ
2) ನನ್ನ ಜಡೆ ಮುಡಿ ಕಟ್ಟುವ ಕನಸು ನನಸಾಗದಿಲ್ಲ
3) ತಾಯಿಯಿದ್ದರೆ ಸಂಪತ್ತು ಹೆಣ್ಣಿಗೆ

III. ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಒಂದೊಂದು ವಾಕ್ಯದಲ್ಲಿ ಉತ್ತರಿಸಿರಿ : (5×1=5)

1) ಮಲ್ಲಿನಾಥ ಪುರಾಣವನ್ನು ಬರೆದವರು ಯಾರು ?
2) ವೃತ್ತಿ ಗಾಯಕರಲ್ಲಿ ಒಬ್ಬರನ್ನು ಹೆಸರಿಸಿ.
3) ದಾಯನಿಧಿ ಎಂದರೇನು ?
4) ಸೂರ್ಯ ಮುಳುಗುವುದಿಲ್ಲ ಕೃತಿಯನ್ನು ಬರೆದವರು ಯಾರು ?
5) ಮಾನವನಾಸೆಗೆ ಕೊನೆಯೆಲ್ಲಿ ಗೀತೆಯು ಯಾವ ಚಲನಚಿತ್ರದಲ್ಲಿ ಬಂದಿದೆ ?

## ಭಾಗ – 2 (ಗದ್ಯ)

IV. ಅ) ಕೆಳಗಿನವುಗಳಲ್ಲಿ ಒಂದು ಪ್ರಶ್ನೆಗೆ ಉತ್ತರಿಸಿರಿ : (1×8=8)

1) ಸಂಸ್ಕೃತಿಯೊಂದರ ಅಧಃಪತನದ ರೂಪಕವಾಗಿ ನಮ್ಮೂರ ಕೆರೆ ಪ್ರಬಂಧ ಹೇಗೆ ಮೂಡಿ ಬಂದಿದೆ? ವಿವರಿಸಿ.

2) ಪ್ರಕೃತಿಗೂ ಮನುಷ್ಯನಿಗೂ ಇರುವ ನಿಕಟ ಸಂಬಂಧವು ನಾ ಡಿಸೋಜರ ಲೇಖನದಲ್ಲಿ ಹೇಗೆ ಬಂದಿದೆ ? ವಿವರಿಸಿ.

ಆ) ಕೆಳಗಿನವುಗಳಲ್ಲಿ ಒಂದು ಪ್ರಶ್ನೆಗೆ ಉತ್ತರಿಸಿರಿ : (1×8=8)

1) ವಿರಹಿಗಳ ಶೃಂಗಾರ ಗದ್ಯಭಾಗದ ಸ್ವಾರಸ್ಯವನ್ನು ಸಂಗ್ರಹಿಸಿ ಬರೆಯಿರಿ.

2) 'ಜೀವಪರ ದೊಂದಿ' ಲೇಖನವು ಮಹಿಳೆಯರಲ್ಲಿ ಆತ್ಮವಿಶ್ವಾಸವನ್ನು ಮೂಡಿಸುವ ವಿಧಾನವನ್ನು ವಿವರಿಸಿ.

V. ಕೆಳಗಿನವುಗಳಲ್ಲಿ ಒಂದು ಪ್ರಶ್ನೆಗೆ ಉತ್ತರಿಸಿರಿ : (1×5=5)

1) ಗಾಂಧೀಜಿಯವರು ಆರಂಭಿಕ ಹಂತದಲ್ಲಿ ಮೈಗೂಡಿಸಿಕೊಂಡ ಅಂಶಗಳು ಯಾವುವು ?

2) ಚಲನಚಿತ್ರಕ್ಕಿಂತ ರಂಗಭೂಮಿ ಇಂದಿಗೂ ಜೀವಂತ ಮಾಧ್ಯಮ – ಈ ವಿಷಯದ ಬಗೆಗೆ ಲೇಖನದಲ್ಲಿ ಬಂದಿರುವ ವಿಚಾರವನ್ನು ಸಂಗ್ರಹಿಸಿ ಬರೆಯಿರಿ.

VI. ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಒಂದೊಂದು ವಾಕ್ಯದಲ್ಲಿ ಉತ್ತರಿಸಿರಿ : (4×1=4)

1) ಶಿವರಾಮ ಕಾರಂತರ ಯಾವ ಕೃತಿಗೆ ಜ್ಞಾನಪೀಠ ಪ್ರಶಸ್ತಿ ಬಂದಿದೆ ?

2) ಆಣೆಕಟ್ಟುಗಳು ಆಧುನಿಕ ಭಾರತದ ದೇವಾಲಯಗಳು ಎಂದು ಹೇಳಿದವರು ಯಾರು ?

3) ಆಡಂ ಮತ್ತು ಈವ್ ಎಂದರೆ ಯಾರು ?

4) ವೇದವ್ಯಾಸರ ತಾಯಿಯ ಹೆಸರೇನು ?

## ಭಾಗ – 3 (ನಾಟಕ)

VII. ಅ) ಕೆಳಗಿನವುಗಳಲ್ಲಿ ಒಂದು ಪ್ರಶ್ನೆಗೆ ಉತ್ತರಿಸಿರಿ : (1×8=8)

1) ವಿಶ್ವಾಮಿತ್ರನು ನರಮೇಧವನ್ನು ಮಾಡಿಸುವುದಾಗಿ ಒಪ್ಪಿ ಕೊಳ್ಳಲು ಕಾರಣವೇನು ? ಈ ಸಂದರ್ಭದಲ್ಲಿ ಎದುರಾಗುವ ಆತಂಕವನ್ನು ವಿವರಿಸಿ.

2) ಅಂಧ್ರಕನ ಸಾವಿಗೆ ಕಾರಣವಾಗುವ ಅಂಶಗಳನ್ನು ಗುರುತಿಸಿ.

ಆ) ಕೆಳಗಿನವುಗಳಲ್ಲಿ ಒಂದು ಪ್ರಶ್ನೆಗೆ ಉತ್ತರಿಸಿರಿ : (1×6=6)

1) ಅಜೀಗರ್ತ ತನ್ನ ಮಗನನ್ನು ಮಾರಾಟ ಮಾಡಲು ಕಾರಣವೇನು ?

2) ನಾಟಕದಲ್ಲಿ ಡಂಗುರದವನ ಪಾತ್ರದ ಮಹತ್ವವನ್ನು ಕುರಿತು ಬರೆಯಿರಿ.

VIII. ಎರಡು ವಾಕ್ಯಗಳಿಗೆ ಸಂದರ್ಭ ಸೂಚಿಸಿ ಸ್ವಾರಸ್ಯವನ್ನು ವಿಶದಪಡಿಸಿರಿ : (2×2=4)

1) ಆಶ್ರಮವಾಸಿಗಳ ಸೊಂಟದ ಗಂಟು ಸುವರ್ಣ ವರಹಗಳಿಂದ ಬೀಗಿ ಹರಿಯುತ್ತಿದೆ.

2) ಹಿಂಸೆ ನ್ಯಾಯಕ್ಕೆ ಪರ್ಯಾಯವಲ್ಲ, ಪರಿಹಾರವೂ ಅಲ್ಲ.

3) ನಾವೇನು ಮಕ್ಕಳನ್ನು ಮಾರಾಟಕ್ಕೆ ಇಟ್ಟಿದ್ದೇವೆಯೆ ?

IX. ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ **ಒಂದೊಂದು** ವಾಕ್ಯದಲ್ಲಿ ಉತ್ತರಿಸಿರಿ : (2×1=2)

1) ಬ್ರಹ್ಮರ್ಷಿಯಾಗುವುದಕ್ಕೆ ವಿಶ್ವಾಮಿತ್ರನಲ್ಲಿ ಯಾವ ಕೊರತೆಯಿತ್ತೆಂದು ವಸಿಷ್ಠರು ಹೇಳಿದ್ದಾರೆ ?

2) ಧರ್ಮಪರಿಷತ್ತು ಸೇರಿದಾಗ ಅಧ್ಯಕ್ಷ ಸ್ಥಾನದಲ್ಲಿ ಯಾವ ವಸ್ತುವನ್ನು ಇಡಲಾಗಿತ್ತು ?